23 DEC 2017

ದಿನಾಂಕ 06-12-2017 ರ ಬುಧವಾರ ಬೆಳಿಗ್ಗೆ 11-00 ಗಂಟೆಗೆ ಶ್ರೀ ಎ.ಎನ್. ರವಿಶಂಕರ್, ಪ್ರಭಾರ ಅಧೀಕ್ಷಕ ಇಂಜಿನಿಯರ್(ವಿ), ಸೆಸ್ಕ್, ಕಾರ್ಯ ಮತ್ತು ಪಾಲನಾ ವೃತ್ತ, ಮಂಡ್ಯ ರವರ ಅಧ್ಯಕ್ಷತೆಯಲ್ಲಿ ಪಾಂಡವಪುರ ಉಪವಿಭಾಗ ಕಛೇರಿಯ ಆವರಣದಲ್ಲಿ ನಡೆದ ಜನ ಸಂಪರ್ಕ ಸಭೆಯ ನಡಾವಳಿಗಳು.

<u>ಹಾಜರಿದ್ದ ಅಧಿಕಾರಿಗಳು / ನೌಕರರು</u>
<u>ಶ್ರೀಯುತ:</u>

| | | |
|---|---|---|
| 1. | ಇ. ರವಿಶಂಕರ್ | : ಕಾನಿಇಂ(ವಿ), ಮಂಡ್ಯ ವೃತ್ತ. |
| 2. | ಎನ್. ಶ್ರೀನಿವಾಸಮೂರ್ತಿ | : ಕಾನಿಇಂ(ವಿ), ಪಾಂಡವಪುರ ವಿಭಾಗ. |
| 3. | ಎಂ. ಪ್ರಕಾಶ್ | : ಲೆಕ್ಕಾಧಿಕಾರಿ, ಪಾಂಡವಪುರ ವಿಭಾಗ. |
| 4. | ವಿ. ಪುಟ್ಟಸ್ವಾಮಿ | : ಸಕಾನಿಇಂ(ವಿ), ಪಾಂಡವಪುರ ಉಪವಿಭಾಗ. |
| 5. | ಹೆಚ್.ಇ. ಮಹದೇವ | : ಸಇಂ(ವಿ), ಪಟ್ಟಣ ಶಾಖೆ, ಪಾಂಡವಪುರ ಉಪವಿಭಾಗ. |
| 6. | ಬಿ. ನಂದೀಶ್ | : ಪ್ರಭಾರ ಸಇಂ(ವಿ), ಟಿ.ಎಸ್. ಛತ್ರ ಶಾಖೆ. |
| 7. | ಎಂ.ಬಿ. ಚಲುವರಾಜು | : ಪ್ರಭಾರ ಸಇಂ(ವಿ), ಮೇಲುಕೋಟೆ ಶಾಖೆ. |
| 8. | ಜಿ. ಸುಷ್ಮ | : ಕಿಇಂ(ವಿ), ಚಿನಕುರಳಿ ಶಾಖೆ. |
| 9. | ಎಲ್. ಕೃಷ್ಣರಂಗರಾಜು | : ಕಿಇಂ(ವಿ), ಮಾಣಿಕ್ಯನಹಳ್ಳಿ ಶಾಖೆ. |
| 10. | ಎ.ಬಿ. ಕಿರಣ್ ಕುಮಾರ್ | : ಪ್ರಭಾರ ಕಿಇಂ(ವಿ), ಕ್ಯಾತನಹಳ್ಳಿ ಶಾಖೆ. |
| 11. | ವಿ. ಕೃಷ್ಣಮೂರ್ತಿ | : ಪ್ರಭಾರ ಕಿಇಂ(ವಿ), ಬನ್ನಂಗಾಡಿ ಶಾಖೆ. |
| 12. | ವಿ. ಕುಮಾರಸ್ವಾಮಿ | : ಪ್ರಭಾರ ಕಿಆಸ., ಪಾಂಡವಪುರ ವಿಭಾಗ. |

ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್(ವಿ), ಸೆಸ್ಕ್, ಕಾರ್ಯ ಮತ್ತು ಪಾಲನಾ ಉಪವಿಭಾಗ, ಪಾಂಡವಪುರ ರವರು ಸಭೆಗೆ ಹಾಜರಿದ್ದ ಎಲ್ಲಾ ಅಧಿಕಾರಿ / ನೌಕರರನ್ನು ಹಾಗೂ ವಿದ್ಯುತ್ ಗ್ರಾಹಕರನ್ನು ಸ್ವಾಗತಿಸಿದರು.

ಸದರಿ ಸಭೆಯಲ್ಲಿ ಹಾಜರಿದ್ದ ವಿದ್ಯುತ್ ಗ್ರಾಹಕರ ಮೌಖಿಕವಾಗಿ ತಿಳಿಸಿದ / ಲಿಖಿತ ಮನವಿಗಳಲ್ಲಿ ಉಲ್ಲೇಖಿಸಿರುವ ವಿದ್ಯುತ್ ಸಂಬಂಧ ಸಮಸ್ಯೆಗಳ ಬಗ್ಗೆ ಚರ್ಚಿಸಿ ಸಭೆಯಲ್ಲಿ ತೆಗೆದುಕೊಂಡ / ತೆಗೆದುಕೊಳ್ಳಬೇಕಾದ ತೀರ್ಮಾನಗಳು ಈ ಕೆಳಕಂಡಂತೆ ಇರುತ್ತವೆ.

S.E.E (Elecl) Works ... DCA EE/O CAOC AO Dvn. AO ... S... 28/12

ಇಂಜಿನಿಯರ್ ... 6325 ಒಳಬಂದ ಸಂಖ್ಯೆ ... ದಿನಾಂಕ 28/12/17

1. <u>ಶ್ರೀ ಪುಟ್ಟೇಗೌಡ, ಲಕ್ಷ್ಮೀಸಾಗರ ಗ್ರಾಮ.</u>

<u>ದೂರು:</u> ತಮ್ಮ ಜಮೀನಿನ ಮೇಲೆ ಹಾದು ಹೋಗಿರುವ 11 ಕೆವಿ ವಿದ್ಯುತ್ ಮಾರ್ಗವನ್ನು ಬೇರೆಡೆಗೆ ಸ್ಥಳಾಂತರಿಸಲು ಈ ಹಿಂದೆಯೇ ಮನವಿ ಮಾಡಿದ್ದು, ಅದರ ಮೇರೆಗೆ ಅಂದಾಜು ಪಟ್ಟಿಯ ಶೇಕಡಾ 10 ರಷ್ಟು ಮೊಬಲಗನ್ನು ಪಾವತಿಸಿ ಸ್ವಂತ ನಿರ್ವಹಣಾ ಕಾಮಗಾರಿ ಯೋಜನೆ ಅಡಿಯಲ್ಲಿ ಕಾಮಗಾರಿ ನಿರ್ವಹಿಸಿಕೊಡಲು ಕೋರಿ ಮನವಿ ಮಾಡಿರುತ್ತಾರೆ.

<u>ಕ್ರಮ:</u> ಅಂದಾಜು ಪಟ್ಟಿಯ ಶೇಕಡಾ 10 ರಷ್ಟು ಮೊಬಲಗನ್ನು ನಿಗಮಕ್ಕೆ ಪಾವತಿಸಿದ್ದು, ಗ್ರಾಹಕರೇ ಗುತ್ತಿಗೆದಾರರ ಮೂಲಕ ಸ್ವಂತ ಕಾಮಗಾರಿ ನಿರ್ವಹಣೆ ಮಾಡಿಸಿಕೊಳ್ಳಬೇಕಾಗಿರುತ್ತದೆ. ಈ ಬಗ್ಗೆ ಸದರಿಯವರಿಗೆ ಮನವರಿಕೆ ಮಾಡಿಕೊಡಲಾಯಿತು.

AET S.R. pl. ... 29/12

2. <u>ಶ್ರೀ ಶಂಕರೇಗೌಡ, ಚಿಕ್ಕಬ್ಯಾಡರಹಳ್ಳಿ ಗ್ರಾಮ, ಮೊಬೈಲ್ ನಂ. 95912 46959.</u>

<u>ದೂರು:</u> ನಮ್ಮ ಅಲೆಮನೆಯ ಬಳಿ ವೈರುಗಳು ಇಳಿ ಬಿದ್ದಿದ್ದು, ವಾಹನಗಳು ಓಡಾಡಲು ತುಂಬಾ ತೊಂದರೆಯಾಗಿದ್ದು, ಇದನ್ನು ಸರಿಪಡಿಸಿಕೊಡುವಂತೆ ಕೋರಿ ಮನವಿ ಮಾಡಿರುತ್ತಾರೆ.

<u>ಕ್ರಮ:</u> ಸದರಿ ಲೈನಿಗೆ ಮಧ್ಯಂತರ ಕಂಬಗಳನ್ನು ಹಾಕಿಕೊಡಲು ಸಂಬಂಧಪಟ್ಟ ಶಾಖಾಧಿಕಾರಿಗೆ ಅಂದಾಜುಪಟ್ಟಿ ತಯಾರಿಸಿ ಸಲ್ಲಿಸಲು ಸೂಚಿಸಲಾಯಿತು.

3. <u>ಶ್ರೀ ಮಾದೇಗೌಡ, ಕಾಳೇನಹಳ್ಳಿ ಗ್ರಾಮ, ಮೊಬೈಲ್ ನಂ. 87222 39477.</u>

<u>ದೂರು:</u> ತಮ್ಮ ಐ.ಪಿ. ಸೆಟ್ ಸ್ಥಾವರಕ್ಕೆ ಶೀಘ್ರ ವಿದ್ಯುತ್ ಯೋಜನೆ ಅಡಿಯಲ್ಲಿ ಕಾಮಗಾರಿ ಸ್ವಂತ ನಿರ್ವಹಣೆ ಮಾಡಿಕೊಂಡಿದ್ದು, 25 ಕೆವಿಎ ಪರಿವರ್ತಕ ಕೊಡಲು ಕೋರಿರುತ್ತಾರೆ.

<u>ಕ್ರಮ:</u> 25 ಕೆವಿಎ ಪರಿವರ್ತಕವನ್ನು ಆದಷ್ಟು ಶೀಘ್ರವಾಗಿ ಕೊಡಿಸುವುದಾಗಿ ತಿಳಿಸಲಾಯಿತು.

4. <u>ಶ್ರೀ ಸಿದ್ದಯ್ಯ ಬಿನ್ ದೊಳ್ಳಯ್ಯ, ಮಲ್ಲಿಗೆರೆ ಗ್ರಾಮ.</u>

<u>ದೂರು:</u> ತನ್ನ ಮನೆಗೆ ಅಣ್ಣೇಗೌಡ ಬಿನ್ ಚಲುವೇಗೌಡ ಎಂಬ ಹೆಸರಿನಲ್ಲಿ ₹ 8,500/- ಗಳಿಗೆ ಬಿಲ್ಲು ನೀಡಿದ್ದು, ಇದನ್ನು ಪರಿಶೀಲಿಸಿಕೊಡಲು ಕೋರಿ ಮನವಿ ಮಾಡಿರುತ್ತಾರೆ.

<u>ಕ್ರಮ:</u> ಇದಕ್ಕೆ ಸ್ಥಳದಲ್ಲೇ ಕಂದಾಯ ಶಾಖೆಯಿಂದ ಮಾಹಿತಿ ಪಡೆದು ಅವರ ಹೆಸರಿನ ಬಿಲ್ಲು ಪಡೆದು ₹ 54/- ಗಳಿಗೆ ಅವರಿಂದ ಹಣ ಪಾವತಿಸಿಕೊಂಡು ಇದೇ ನಿಮ್ಮ ಆರ್.ಆರ್.ಸಂಖ್ಯೆ ಎಂದು ತಿಳಿಸಲಾಯಿತು.

5. <u>ಶ್ರೀ ಶಿವಕುಮಾರ್, ಅನುನಹಳ್ಳಿ ಗ್ರಾಮ, ಮೊಬೈಲ್ ನಂ. 81838 76674.</u>

<u>ದೂರು:</u> ನನ್ನ ಐ.ಪಿ. ಸ್ಥಾವರಕ್ಕೆ ಅಳವಡಿಸಿರುವ 25 ಕೆವಿಎ ಪರಿವರ್ತಕದ ಸ್ಟ್ರಕ್ಚರ್ ಕಂಬದಿಂದ ಬೇರೊಂದು ಕಾಮಗಾರಿಗೆ ಲೈನ್ ಎಳೆಯುವಾಗ ಗುತ್ತಿಗೆದಾರರು ಸ್ಟ್ರಕ್ಚರ್‌ನ ಕಂಬದ ತುದಿಯನ್ನು ಮುರಿದು ಹಾಕಿರುತ್ತಾರೆ. ಇದನ್ನು ಸರಿಪಡಿಸಿಕೊಡುವಂತೆ ಕೋರಿ ಮನವಿ ಮಾಡಿರುತ್ತಾರೆ.

<u>ಕ್ರಮ:</u> ಸಂಬಂಧಪಟ್ಟ ಶಾಖಾಧಿಕಾರಿಗೆ ಸೂಚಿಸಿ ಇದಕ್ಕೆ ಕಾರಣರಾದ ಗುತ್ತಿಗೆದಾರರಿಂದ ಕಂಬವನ್ನು 15 ದಿವಸದೊಳಗೆ ಬದಲಿಸಿಕೊಡಲು ಕ್ರಮ ಕೈಗೊಳ್ಳುವುದಾಗಿ ತಿಳಿಸಲಾಯಿತು.

6. <u>ಶ್ರೀ ಹೆಚ್.ಆರ್. ಕೃಷ್ಣೇಗೌಡ, ಗಾಣದಹೊಸೂರು ಗ್ರಾಮ, ಮೊಬೈಲ್ ನಂ. 99014 17402.</u>

<u>ದೂರು:</u> ತನ್ನ ಐ.ಪಿ. ವ್ಯಾಪ್ತಿಯಲ್ಲಿ 17 ಕಬ್ಬಿಣದ ಕಂಬಗಳಿದ್ದು ಮತ್ತು ಹಳೆಯದಾದ ತಂತಿಯು ಆಗಾಗ್ಗೆ ತುಂಡಾಗಿ ಬಿದ್ದು ಕಂಬವು ಗ್ರೌಂಡ್ ಆಗಿ ಅಪಾಯವಾಗುತ್ತಿದೆ. ಕಂಬ ಮತ್ತು ತಂತಿಯನ್ನು ಬದಲಾಯಿಸಿಕೊಡಬೇಕೆಂದು ಮನವಿ ಮಾಡಿರುತ್ತಾರೆ.

<u>ಕ್ರಮ:</u> ಈ ಕಾಮಗಾರಿಗೆ ಸಂಬಂಧಿಸಿದಂತೆ ಅನುದಾನದ ಕೊರತೆ ಇರುವುದರಿಂದ ವೃತ್ತ ಕಛೇರಿಗೆ ಸಂಪರ್ಕಿಸಿ ಅನುದಾನ ಪಡೆದು ಮಾರ್ಚ್ 2018 ರ ಒಳಗಾಗಿ ಕಾಮಗಾರಿಯನ್ನು ಪೂರೈಸಿಕೊಡುವುದಾಗಿ ತಿಳಿಸಲಾಯಿತು.

7. <u>ಶ್ರೀ ನಾಗರಾಜು, ಚಿಕ್ಕಯಾರಹಳ್ಳಿ ಗ್ರಾಮ, ಮೊಬೈಲ್ ನಂ. 91484 12103.</u>

<u>ದೂರು:</u> ನಮ್ಮ ಮನೆಗೆ ಅಳವಡಿಸಿದ್ದ ಮಾಪಕ ಸುಟ್ಟು ಹೋಗಿದ್ದು, ಬದಲಾಯಿಸಿಕೊಡಬೇಕೆಂದು ಮನವಿ ಮಾಡಿರುತ್ತಾರೆ.

<u>ಕ್ರಮ:</u> ಇದಕ್ಕೆ ಸಂಬಂಧಪಟ್ಟ ಶಾಖಾಧಿಕಾರಿಗೆ ಸೂಚಿಸಿ ನಿಯಮಾನುಸಾರ ತಕ್ಷಣವೇ ಕ್ರಮ ಕೈಗೊಂಡು ಮಾಪಕ ಬದಲಿಸುವಂತೆ ತಿಳಿಸಲಾಯಿತು.

8. <u>ಶ್ರೀ ತಿಮ್ಮಶೆಟ್ಟಿ, ಅನುನಹಳ್ಳಿ ಗ್ರಾಮ, ಮೊಬೈಲ್ ನಂ. 99009 89168.</u>

<u>ದೂರು:</u> ತನ್ನ ಖಾಲಿ ನಿವೇಶನದಲ್ಲಿ ಕಂಬ ಇರುವುದರಿಂದ ಮನೆ ನಿರ್ಮಿಸಲು ತೊಂದರೆಯಾಗಿರುತ್ತದೆ. ಪಕ್ಕಕ್ಕೆ ಬದಲಾಯಿಸಿಕೊಡಬೇಕೆಂದು ಮನವಿ ಮಾಡಿರುತ್ತಾರೆ.

<u>ಕ್ರಮ:</u> ಈ ಸಂಬಂಧ ಸ್ವಂತ ನಿರ್ವಹಣಾ ಕಾಮಗಾರಿ ಯೋಜನೆ ಅಡಿಯಲ್ಲಿ ಕಂಬ ಸ್ಥಳಾಂತರಿಸಲು ಕ್ರಮಕೈಗೊಳ್ಳುವಂತೆ ಸಂಬಂಧಪಟ್ಟ ಶಾಖಾಧಿಕಾರಿಗೆ ಸೂಚಿಸಲಾಯಿತು.

9. <u>ಶ್ರೀ ನಂದೀಶಪ್ಪ, ಹಾಗನಹಳ್ಳಿ ಗ್ರಾಮ, ಮೊಬೈಲ್ ನಂ. 82967 90443.</u>

<u>ದೂರು:</u> ನಮ್ಮ ಐ.ಪಿ. ವ್ಯಾಪ್ತಿಯಲ್ಲಿ ಅಳವಡಿಸಿರುವ 100 ಕೆವಿಎ ಪರಿವರ್ತಕದ ಮೇಲೆ 25 ಕ್ಕೂ ಹೆಚ್ಚು ಪಂಪುಸೆಟ್ಟುಗಳಿದ್ದು, ಅದರಲ್ಲಿ ಅನಧಿಕೃತ ಪಂಪುಸೆಟ್ಟುಗಳೇ ಹೆಚ್ಚಿರುತ್ತವೆ. ಇದರಿಂದಾಗಿ ಪರಿವರ್ತಕವು ಪದೇ ಪದೇ ಸುಟ್ಟು ಹೋಗುತ್ತಿದ್ದು, ನಮ್ಮ ಬೆಳೆಗಳಿಗೆ ತೊಂದರೆಯಾಗುತ್ತಿದೆ. ಈಗ ಸುಟ್ಟಿರುವ ಪರಿವರ್ತಕವನ್ನು ಬದಲಾಯಿಸಿಕೊಟ್ಟು ಅನಧಿಕೃತ ಐ.ಪಿ. ಸ್ಥಾವರಗಳನ್ನು ಕಡಿತ ಮಾಡುವಂತೆ ಮನವಿ ಮಾಡಿರುತ್ತಾರೆ.

<u>ಕ್ರಮ:</u> ಈ ವಿಷಯವಾಗಿ ಅನಧಿಕೃತ ಐ.ಪಿ. ಸ್ಥಾವರಗಳನ್ನು ನಾಳೆಯೇ ಖುದ್ದು ಸ್ಥಳ ಪರಿಶೀಲಿಸಿ ಸದರಿ ರೈತರ ಸಹಕಾರವನ್ನು ಪಡೆದು ಅನಧಿಕೃತ ಐ.ಪಿ. ಸ್ಥಾವರಗಳ ವಿದ್ಯುತ್ ನಿಲುಗಡೆ ಮಾಡಬೇಕೆಂದು ಸಂಬಂಧಪಟ್ಟ ಶಾಖಾಧಿಕಾರಿಗೆ ಸೂಚಿಸಿ, ನಂತರ ಪರಿವರ್ತಕವನ್ನು ಬದಲಾಯಿಸುವಂತೆ ತಿಳಿಸಲಾಯಿತು.

10. <u>ಶ್ರೀ ಯೋಗರಾಜು, ಕಣಿವೆಕೊಪ್ಪಲು ಗ್ರಾಮ, ಮೊಬೈಲ್ ನಂ. 89709 47699.</u>

<u>ದೂರು:</u> ನಮ್ಮ ಐ.ಪಿ. ಸ್ಥಾವರಗಳ ಭಾಗದಲ್ಲಿ 4 ACSR ವೈರು ಇದ್ದು, ವೋಲ್ಟೇಜ್‌ನ ಸಮಸ್ಯೆಯಿಂದ ಮೋಟಾರ್‌ಗಳು ಚಾಲನೆಯಾಗುತ್ತಿಲ್ಲ ಮತ್ತು ನಾವಿರುವ ಭಾಗದಲ್ಲಿ ವಿದ್ಯುತ್ ಮಾರ್ಗದ ಮೇಲೆ ಬಿದಿರು ಮೆಳೆ ಹರಡಿಕೊಂಡಿರುತ್ತದೆ. ಇದರಿಂದ ಆಗಾಗ್ಗೆ ವಿದ್ಯುತ್ ಅಡಚಣೆ ಉಂಟಾಗುತ್ತಿರುತ್ತದೆ. ಇದನ್ನು ಸರಿಪಡಿಸಿಕೊಡುವಂತೆ ಕೋರಿ ಮನವಿ ಮಾಡಿರುತ್ತಾರೆ.

<u>ಕ್ರಮ:</u> ಈ ವಿಷಯವಾಗಿ ಹಾಲಿ ಇರುವ 4 ACSR ವೈರನ್ನು ಬದಲಾಯಿಸಿ 2 ACSR ವೈರನ್ನು ಹಾಕುವುದಕ್ಕೆ ನಿಯಮಾನುಸಾರ ಕ್ರಮಕೈಗೊಳ್ಳುವಂತೆ ಹಾಗೂ ಹಾಲಿ ಇರುವ ಸಿಬ್ಬಂದಿಯನ್ನು ಬಳಸಿಕೊಂಡು ಬಿದಿರು ಮೆಳೆಯನ್ನು ಕಡಿದು ಹಾಕುವಂತೆ ಸಂಬಂಧಪಟ್ಟ ಶಾಖಾಧಿಕಾರಿಗೆ ಸೂಚಿಸಲಾಯಿತು.

11. <u>ಶ್ರೀ ಜಗದೀಶ್, ತಿರುಮಲಾಪುರ ಗ್ರಾಮ, ಮೊಬೈಲ್ ನಂ. 98805 13719.</u>

<u>ದೂರು:</u> ತಿರುಮಲಾಪುರ ಗ್ರಾಮದಲ್ಲಿ ವೈರು ಜೋತು ಬಿದ್ದಿರುತ್ತದೆ. ಇದನ್ನು ಸರಿಪಡಿಸಿಕೊಡಬೇಕೆಂದು ಮನವಿ ಮಾಡಿರುತ್ತಾರೆ.

**ಕ್ರಮ:** ಸದರಿ ಲೈನಿಗೆ ಮಧ್ಯಂತರ ಕಂಬಗಳನ್ನು ಹಾಕಿಕೊಡಲು ಸಂಬಂಧಪಟ್ಟ ಶಾಖಾಧಿಕಾರಿಗೆ ಅಂದಾಜುಪಟ್ಟಿ ತಯಾರಿಸಿ ಸಲ್ಲಿಸಲು ಸೂಚಿಸಲಾಯಿತು. .

**12. ಶ್ರೀ ಚಿಕ್ಕೋನು, ಕನಗನಮರಡಿ ಗ್ರಾಮ, ಮೊಬೈಲ್ ನಂ. 98449 55998.**

**ದೂರು:** ನಮ್ಮ ಐ.ಪಿ. ವ್ಯಾಪ್ತಿಯಲ್ಲಿ ವೈರುಗಳು ಇಳಿ ಬಿದ್ದಿದ್ದು, ಬೆಳೆಗಳಿಗೆ ಹಾನಿಯಾಗುವ ಸಂಭವ ಇರುವುದರಿಂದ ಇದನ್ನು ಸರಿಪಡಿಸಿಕೊಡುವಂತೆ ಕೋರಿ ಮನವಿ ಮಾಡಿರುತ್ತಾರೆ.

**ಕ್ರಮ:** ಸದರಿ ಲೈನಿಗೆ 3 ಮಧ್ಯಂತರ ಕಂಬಗಳನ್ನು ಹಾಕಿಕೊಡಲು ಸಂಬಂಧಪಟ್ಟ ಶಾಖಾಧಿಕಾರಿಗೆ ಅಂದಾಜುಪಟ್ಟಿ ತಯಾರಿಸಿ ಸಲ್ಲಿಸಲು ಸೂಚಿಸಲಾಯಿತು.

**:: ಸಭೆಯನ್ನು ಮಧ್ಯಾಹ್ನ 01-00 ಗಂಟೆಗೆ ಮುಕ್ತಾಯಗೊಳಿಸಲಾಯಿತು ::**

ಮೆಮೊ ಸಂಖ್ಯೆ: ಸಕಾನಿಇಂ(ವಿ)/ಸಇಂ(ತಾಂ)/ಪಾ.ಪುರ/17-18/2140-53 ದಿನಾಂಕ: 21-12-2017

**ಪ್ರತಿಯನ್ನು ಇವರ ಅವಗಾಹನೆಗೆ ಸಲ್ಲಿಸಲಾಗಿದೆ:**

1. ಮುಖ್ಯ ಇಂಜಿನಿಯರ್(ವಿ), ಸೆಸ್ಕ್, ಕಾರ್ಯ ಮತ್ತು ಪಾಲನಾ ವಲಯ, ಮೈಸೂರು.
2. ಪ್ರಧಾನ ವ್ಯವಸ್ಥಾಪಕರು(ತಾಂತ್ರಿಕ), ಸೆಸ್ಕ್, ನಿಗಮ ಕಾರ್ಯಾಲಯ, ಮೈಸೂರು.
3. ಅಧೀಕ್ಷಕ ಇಂಜಿನಿಯರ್(ವಿ), ಸೆಸ್ಕ್, ಕಾರ್ಯ ಮತ್ತು ಪಾಲನಾ ವೃತ್ತ, ಮಂಡ್ಯ.
4. ಕಾರ್ಯನಿರ್ವಾಹಕ ಇಂಜಿನಿಯರ್(ವಿ), ಸೆಸ್ಕ್, ಕಾರ್ಯ ಮತ್ತು ಪಾಲನಾ ವಿಭಾಗ, ಪಾಂಡವಪುರ.

**ಪ್ರತಿಯನ್ನು ಇವರ ಮಾಹಿತಿಗಾಗಿ ಕಳುಹಿಸಲಾಗಿದೆ:**

1. ಲೆಕ್ಕಾಧಿಕಾರಿ, ಸೆಸ್ಕ್, ಪಾಂಡವಪುರ.
2. ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್(ವಿ), ಸೆಸ್ಕ್, ವಿಭಾಗೀಯ ಕಛೇರಿ, ಪಾಂಡವಪುರ.
3. ಲೆಕ್ಕಾಧಿಕಾರಿ, ಆಂ.ಪ., ಸೆಸ್ಕ್, ಪಾಂಡವಪುರ.

**ಪ್ರತಿಯನ್ನು ಇವರ ಮಾಹಿತಿಗಾಗಿ ಹಾಗೂ ಸೂಕ್ತ ಕ್ರಮಕ್ಕಾಗಿ ಕಳುಹಿಸಲಾಗಿದೆ:**

1. ಶಾಖಾಧಿಕಾರಿ, ಸೆಸ್ಕ್, ಕಾರ್ಯ ಮತ್ತು ಪಾಲನಾ ಶಾಖೆ, ಪಟ್ಟಣ (ಪಾಂಡವಪುರ) / ಟಿ.ಎಸ್. ಛತ್ರ / ಚಿನಕುರಳಿ / ಕ್ಯಾತನಹಳ್ಳಿ / ಬನ್ನಂಗಾಡಿ / ಮೇಲುಕೋಟೆ / ಮಾಣಿಕ್ಯನಹಳ್ಳಿ.

ಸಇಂ(ತಾಂ) / ಮುಕ.

ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್(ವಿ),
ಸೆಸ್ಕ್, ಪಾಂಡವಪುರ ಉಪವಿಭಾಗ.